


ರಾಣಿಯರೂ ಅಸೂಯೆ ಮತ್ತು ಮಾತ್ಸರ್ಯಗಳಿಂದ ಒಳಗೊಳಗೇ ಕುದಿಯುತ್ತಿದ್ದರೂ, ರಾಣಾರ ಭಯದಿಂದ ಬಹಿರಂಗವಾಗಿ ಏನೂ ಮಾಡಲೂ ಸಾಧ್ಯವಾಗದೆ ಕೈ ಕೈ ಹಿಸುಕಿಕೊಳ್ಳುತ್ತಿದ್ದರು. ಈಗ ರಾಣಾರ ನಿಧನದಿಂದ ಏಕಾಂಗಿಯಾಗಿ ಉಳಿಯುವ ತನ್ನನ್ನು ಓರ್ವ ದಾಸಿಗಿಂತಲೂ ಕೀಳಾಗಿ ಕಾಣಬಹುದೆಂಬುದನ್ನು ಊಹಿಸಿಕೊಂಡೇ ಅಂಜಾಬಾಯಿಯು ಆಪಾದಮಸ್ತಕ ಕಂಪಿಸಿದಳು.

ಕೊನೆಗೊಮ್ಮೆ ತನ್ನ ಉತ್ತರಕ್ಕಾಗಿ ಕಾತರದಿಂದ ಕಾಯುತ್ತಾ ನಿಂತಿದ್ದ ಪ್ರಮುಖರ ಬಳಿ ಹೋಗಿ, 'ನಾನು ಸತಿ ಹೋಗಲು ಸಿದ್ಧಳಿದ್ದೇನೆ' ಎಂದು ಚುಟುಕಾಗಿ ಹೇಳಿ ಅವರೆಲ್ಲರಿಗೂ ಕೈ ಮುಗಿದಳು. ಆಕೆ ಒಪ್ಪಿದ್ದನ್ನು ಕೇಳಿ ಅಂತಹ ದುಃಖದ ಸಂದರ್ಭದಲ್ಲೂ ಅವರೆಲ್ಲರ ಮುಖದ ಮೇಲೆ ಸಂತಸದ ಮತ್ತು ಸಮಾಧಾನದ ಕಳೆ ಮೂಡಿತು. ತಡ ಮಾಡದೆ ಅವರೆಲ್ಲರೂ ಹಿರಿಯ ಮಹಾರಾಣಿಯರು ಮತ್ತು ಅನುಭವಸ್ಥ ದಾಸಿಯರ ಬಳಿಗೆ ತೆರಳಿ ಅಂಜಾಬಾಯಿಯನ್ನು ಆದಷ್ಟು ಶೀಘ್ರವಾಗಿ ನವ ವಧುವಿನಂತೆ ಶೃಂಗರಿಸುವಂತೆ ಸೂಕ್ತ ನಿರ್ದೇಶನಗಳನ್ನಿತ್ತರು.

ಅಂಜಾಬಾಯಿಗೆ ಸ್ನಾನ ಮಾಡಿಸಿ, ಆಕೆಯ ದೇಹಕ್ಕೆ ಪನ್ನೀರು ಸಿಂಪಡಿಸಿ, ಅರಿಷಿನ, ಕುಂಕುಮ ಚಂದನಗಳ ಲೇಪವನ್ನು ದಾಸಿಯರು ಹಾಕಿದರು. ಬೆಲೆ ಬಾಳುವ ಹಸಿರು ರೇಷ್ಮೆ ಸೀರೆಯನ್ನು ಉಡಿಸಿದರು. ಅನಂತರ ಬಂಗಾರದ, ವಜ್ರ–ವೈಢೂರ್ಯ ಮುತ್ತು ರತ್ನಗಳ ಆಭರಣಗಳನ್ನು ಕೊರಳು, ನಾಸಿಕ, ತೋಳು, ಸೊಂಟ, ಕಾಲುಗಳಿಗೆ ಹಾಕಿದರು. ಬಗೆ ಬಗೆಯ ಹೂವುಗಳಿಂದ ಕಟ್ಟಿದ ಹೂಮಾಲೆಗಳನ್ನು ಮುಡಿಗೆ, ಕೊರಳಿಗೆ ಅಲಂಕರಿಸಿದರು. ಈಗ ಅಂಜಾಬಾಯಿ ಸಾಕ್ಷಾತ್ ನವವಧುವಿನಂತೆ ಕಂಗೊಳಿಸ ತೊಡಗಿದಳು. ಆದರೆ ಅರಮನೆಯಲ್ಲಿದ್ದ ಪುರಾತನವಾದಿಗಳು ಮತ್ತು ಸಂಪ್ರದಾಯ ವಾದಿಗಳು ಇಷ್ಟರಿಂದಲೇ ತೃಪ್ತರಾಗಿರಲಿಲ್ಲ. ಮುಂದೆ ಯಾವುದೇ ಅಹಿತಕರ ಅವಘಡಗಳು ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ಅವರ ಮೇಲಿತ್ತು. ಅಂಜಾಬಾಯಿಯ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳನ್ನು ಅವರು ನಿಷ್ಕ್ರಿಯಗೊಳಿಸಬೇಕಾಗಿತ್ತು. ಸಾಕಷ್ಟು ಮುಂಜಾಗ್ರತೆ ವಹಿಸಿ ಅವರು ರಾಜ್ಯ ವೈದ್ಯರನ್ನು ಈ ಕುರಿತು ಸಂಪರ್ಕಿಸಿದ್ದರು. ರಾಜ ವೈದ್ಯರು ಅನೇಕ ಬಗೆಯ ಗಿಡಮೂಲಿಕೆಗಳು ಮತ್ತು ಅಫೀಮನ್ನು ಬೆರೆಸಿ ಚೆನ್ನಾಗಿ ಅರೆದು ಮಾದಕ ಪೇಯವನ್ನು ತಯಾರಿಸಿಟ್ಟಿದ್ದರು. ಅಂಜಾ ಬಾಯಿಯ ಕೆಲವರು ಆಪ್ತ ದಾಸಿಯರು ರಾಜವೈದ್ಯರ ಆದೇಶದಂತೆ ಆ ಪೇಯವನ್ನು ಆಕೆಗೆ ಕುಡಿಸಿದರು.

ಅರಮನೆಯ ಇನ್ನೊಂದು ಭಾಗದಲ್ಲಿ ರಾಣಾ ಅಮರಸಿಂಗರ ಶವಕ್ಕೆ ಸ್ನಾನ ಮಾಡಿಸಿ, ಮೈಗೆಲ್ಲಾ ಸುಗಂಧ ದ್ರವ್ಯಗಳನ್ನು ಹಚ್ಚಿದರು. ರಾಜ ಪೋಷಾಕುಗಳನ್ನು ಹಾಕಿ ಅವರು ಧರಿಸುತ್ತಿದ್ದ ಆಭರಣಗಳನ್ನು ತೊಡಿಸಿದರು. ಅವರ ಶವದ ಪಕ್ಕ ರತ್ನ ಖಚಿತವಾದ ಹಿಡಿಯನ್ನುಳ್ಳ ಪಟ್ಟದ ಖಡ್ಗವನ್ನು ಇಡಲಾಯಿತು. ಅಲಂಕೃತ ಶವವನ್ನು ಅಲಂಕರಿಸಿದ ರಾಜರಥದಲ್ಲಿ ಇಡಲಾಯಿತು. ಸಂಪ್ರದಾಯದ ಪ್ರಕಾರ ಪೂಜಾದಿಗಳು ಮುಗಿದ ನಂತರ ರಾಜ ಬೀದಿಯಲ್ಲಿ ಶವಯಾತ್ರೆ ಆರಂಭವಾಯಿತು. ರಾಣಾರ ಶವವಿದ್ದ ರಥದ ಪಕ್ಕದಲ್ಲೇ ಅಲಂಕೃತ ಪಟ್ಟದ ಕುದುರೆಯ ಮೇಲೆ ಸರ್ವಾಭರಣ ಭೂಷಿತೆಯಾದ ಅಂಜಾಬಾಯಿಯನ್ನು ಕೂರಿಸಲಾಗಿತ್ತು. ಆ ಕುದುರೆ ಹಿಂದೆ ಮುಂದೆ ಮತ್ತು ಅಕ್ಕ–ಪಕ್ಕದಲ್ಲಿ ಶಸ್ತ್ರಸಜ್ಜಿತ ಸೈನಿಕರು ನಡೆದು ಬರುತ್ತಿದ್ದರು. ಅಂಜಾಬಾಯಿಯ ಮುಖ ಮೇಲೆ ಉನ್ಮತ್ತ ಕಳೆಯೊಂದು ನರ್ತಿಸುತ್ತಿತ್ತು. ರಾಜಬೀದಿಯ ಅಕ್ಕಪಕ್ಕದಲ್ಲಿ ನಿಂತಿದ್ದ ಪ್ರಜೆಗಳು ಕಣ್ಣೀರು ಸುರಿಸುತ್ತಿದ್ದರು. ಶವಯಾತ್ರೆಯ ಹಿಂದೆ ಮಂತ್ರಿ ಮಂಡಲದ ಸದಸ್ಯರು, ಬಂಧು–ಬಾಂಧವರು, ಸೈನ್ಯದ ಮುಖಂಡರು, ಸಾಮಂತ ರಾಜರುಗಳು ಮತ್ತು ರಾಜಧಾನಿಯ ಪ್ರಮುಖರು ದುಃಖತಪ್ತರಾಗಿ ಮೌನವಾಗಿ ಹೆಜ್ಜೆ ಹಾಕುತ್ತಿದ್ದರು.

ಶವ ಯಾತ್ರೆ ಅಗ್ನಿ ಸಂಸ್ಕಾರ ನಡೆಯಬೇಕಿದ್ದ ಸ್ಥಳದಲ್ಲಿ ಬಂದು ನಿಂತಿತು. ಹತ್ತಾರು ಎಕರೆಗಳಷ್ಟು ವಿಸ್ತೀರ್ಣ ವಾದ ಆ ಜಾಗ ರಾಜ ಕುಟುಂಬದರ ಸ್ಮಶಾನ ಭೂಮಿಯಾಗಿತ್ತು. ಅದಾಗಲೇ ಅಲ್ಲಿ ಶ್ರೀಗಂಧ, ಆಲ ಮತ್ತು ಬಿಲ್ವ ವೃಕ್ಷಗಳ ಕಟ್ಟಿಗೆಗಳ ಸೀಳಿದ ತುಂಡುಗಳನ್ನು ಬಳಸಿಕೊಂಡು ವಿಶಾಲವಾದ ಚಿತೆಯನ್ನು ಸಿದ್ಧಪಡಿಸಲಾಗಿತ್ತು. ರಾಣಾ ಅಮರಸಿಂಗರ ಶವವನ್ನು ಚಿತೆಯ ಮೇಲೆ ಮಲಗಿಸಲಾಯಿತು. ಅವರ ಮೈಮೇಲಿದ್ದ ಆಭರಣಗಳನ್ನು ಮತ್ತು ಪಟ್ಟದ ಖಡ್ಗವನ್ನು ತೆಗೆದು ರಾಜ ಭಂಡಾರಿಯ ವಶಕ್ಕೆ ಒಪ್ಪಿಸಲಾಯಿತು. ಆನಂತರ ಅಂಜಾಬಾಯಿ ಯನ್ನು ಚಿತೆಯ ಮೇಲೆ ಕೂರಿಸಲಾಯಿತು. ಆಕೆಗೆ ತೊಡಿಸಿದ್ದ ಆಭರಣಗಳನ್ನೂ ತೆಗೆದು ರಾಜ ಭಂಡಾರಿಯ ವಶಕ್ಕೆ ಒಪ್ಪಿಸಲಾಯಿತು. ರಾಣಾರ ಶವದ ಶಿರೋಭಾಗವನ್ನು ಅಂಜಾಬಾಯಿಯ ಮಡಿಲಲ್ಲಿ ಇಡಲಾಯಿತು. ಆಮೇಲೆ ಮಣಗಟ್ಟಲೆ ಪಚ್ಚ ಕರ್ಪೂರ ಮತ್ತು ಸುಗಂಧ ದ್ರವ್ಯಗಳನ್ನು ಅವರ ಮೇಲೆ ಸುರಿಯಲಾಯಿತು. ಅಂಜಾಬಾಯಿ ಈಗ ತಲೆಗೂದಲನ್ನು ಕೆದರಿಕೊಂಡು ದೆವ್ವ ಮೆಟ್ಟಿಕೊಂಡವರಂತೆ ವರ್ತುಲಾಕಾರವಾಗಿ ತಲೆಯನ್ನು ತೂಗುತ್ತಿದ್ದಳು. ಆಕೆಯ ಕಣ್ಣುಗಳು ಕೆಂಡ ದುಂಡೆಗಳಂತಾಗಿದ್ದವು. ಆಕೆಗೆ ಕುಡಿಸಲ್ಪಟ್ಟಿದ್ದ ಮಾದಕ ಪೇಯ ತನ್ನ ಪ್ರಭಾವವನ್ನು ಬೀರಿತ್ತು!

ರಾಜ ಪುರೋಹಿತರು ಶಾಸ್ತ್ರೋಕ್ತವಾಗಿ ಅಗ್ನಿಸಂಸ್ಕಾರದ ವಿಧಿ ವಿಧಾನಗಳನ್ನು ಪೂರೈಸಿದರು. ಆಮೇಲೆ ರಾಜ್ಯದ ಉತ್ತರಾಧಿಕಾರಿಯಿಂದ ಚಿತೆಗೆ ಅಗ್ನಿಸ್ಪರ್ಶ ಮಾಡಿಸಲಾಯಿತು. ಚಿತೆ ಜಾಜ್ವಲ್ಯಮಾನವಾಗಿ ಉರಿಯ ತೊಡಗಿತು. ಅದರ ಕೆನ್ನಾಲಿಗೆ ಆಳೆತ್ತರಕ್ಕೆ ಚಾಚಿಕೊಂಡಿತು. ಚಿತೆಯ ಸುತ್ತ ನೆರೆದಿದ್ದ ಜನರೆಲ್ಲಾ 'ರಾಣಾ ಅಮರಸಿಂಗರು ಚಿರಾಯುವಾಗಲಿ, ರಾಣಿ ಅಂಜಾಬಾಯಿಯ ಕೀರ್ತಿ ದಶದಿಕ್ಕುಗಳಿಗೂ ಹರಡಲಿ!' ಎಂದು ಉಚ್ಛಸ್ವರದಲ್ಲಿ ಘೋಷಣೆ ಮಾಡ ತೊಡಗಿದರು. ಬೆಂಕಿ ಜ್ವಾಲೆಯಲ್ಲಿ ಸಜೀವವಾಗಿ ಬೆಂದು ಹೋಗುತ್ತಿದ್ದ ಅಂಜಾಬಾಯಿಯ ಚೀತ್ಕಾರಗಳು ನೆರೆದ ಪ್ರಜೆಗಳಿಗೆ ಕೇಳಿಸದಿರಲೆಂದು ಡೋಲಿನವರು ರಣ ಹಲಗೆಯವರು ಮತ್ತು ನಗಾರಿಯವರು ಕಿವಿಡಗಚಿಕ್ಕುವಂತೆ ಬಾರಿಸ ತೊಡಗಿದರು. ಹದಿನೈದು ಇಪ್ಪತ್ತು ನಿಮಿಷಗಳೊಳಗೆ ಸತಿ ಸಹಗಮನ ಮುಗಿದು ಹೋಗಿತ್ತು! ಸಂಪ್ರದಾಯವಾದಿಗಳ ಅಜ್ಞಾನ, ಮೂಢನಂಬಿಕೆ ಮತ್ತು ಮಿಥ್ಯಾಕೀರ್ತಿಯ ದೆಸೆಯಿಂದ ಮುಗ್ಧ ಜೀವಿಯೊಂದರ ಅಮೂಲ್ಯ ಜೀವ ಬಲಿಯಾಗಿ ಹೋಗಿತ್ತು. ■

ಅಂದು ನಾನು ಮನೆಗೆ ಬಂದಾಗ ವಾತಾವರಣ ಎಂದಿನಂತೆ ಇರಲಿಲ್ಲ. ಐದು ವರುಷದ ಮಗ ಸುರೇಶ ಐ ಪ್ಯಾಡ್‌ನಲ್ಲಿ ಗೇಮ್ಸ್ ಆಡುತ್ತಿದ್ದ. ಪ್ರತಿದಿನ ನಗುಮೊಗದಿಂದ ಎದುರುಗೊಳ್ಳುತ್ತಿದ್ದ ಪ್ರಭಾಳ ಸುಳಿವಿರಲಿಲ್ಲ. ನಾನು ಕಾಲು ತೊಳೆದು ಮುಖ ಒರೆಸಿಕೊಳ್ಳುವಾಗ, ಮಗಳು ನಾಲ್ಕು ವರ್ಷದ ರಮ್ಯ, ವಾರಿಜಾ ಆಂಟಿಯ ಜೊತೆ ಅಮ್ಮನ ಜಗಳವಾಗಿದೆ ಎಂದು ಉಸುರಿದಳು.

ವಾರಿಜಾ ನಮ್ಮ ಮನೆಯ ಪಕ್ಕದಲ್ಲೇ ಇರುವ ನೇಬರ್. ಅಷ್ಟೊಂದು ಕಲಿತಿರದ, ವಯಸ್ಸಿನಲ್ಲಿ ಪ್ರಭಾಳಿಗಿಂತ ಹಿರಿಯಳಾದರೂ ಪ್ರಭಾಳ ಜೊತೆ ಅನ್ಯೋನ್ಯವಾಗಿರುವವಳು. ವಾರಿಜಾಳದು ಸ್ವಂತ ಮನೆಯಾದರೆ ನಮ್ಮದು ಬಾಡಿಗೆ ಮನೆ. ನಾವು ಈ ಮನೆಗೆ ಬಂದು ಸುಮಾರು ಎರಡು ವರ್ಷಗಳಾಗಿದೆ. ಓಣಿಯ ನಾಲಕೈದು ಮನೆಯ ಹೆಂಗಸರು ತುಂಬಾ ಅನ್ಯೋನ್ಯವಾಗಿದ್ದು ಒಬ್ಬರ ಕಷ್ಟಸುಖದಲ್ಲಿ ಇನ್ನೊಬ್ಬರಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ವಾರಿಜಾ ಹಾಗೂ ಪ್ರಭಾ ಜಗಳವಾಡಿದ್ದಾರೆಂದರೆ ನನಗೆ ನಂಬಲಾಗಲಿಲ್ಲ.

ಅದು ಆದದ್ದು ಹೀಗೆ. ಸುಮಾರು ಒಂದು ವಾರದ ಹಿಂದೆ ಹಿಂಡಾಲಿಯಮ್, ಅಲ್ಯುಮಿನಿಯಮ್ ಪಾತ್ರೆ ಅಥವಾ ಡಬ್ಬಗಳನ್ನು ಕರಗಿಸಿ ಕರಕುಶಲ ವಸ್ತುಗಳನ್ನು ಮಾಡಿಕೊಡುವ ಬೀದಿ ಮಾರಾಟಗಾರನೊಬ್ಬ ಬಂದಿದ್ದಾನೆ. ಪ್ರಭಾ ಮನೆಯಲ್ಲಿದ್ದ ಹಳೆಯ ಹಿಂಡಾಲಿಯಮ್ ಡಬ್ಬಗಳನ್ನು ಕೊಟ್ಟು, ಒಂದು ಲಕ್ಷ್ಮೀ ಪ್ರತಿಮೆ ಹಾಗೂ ಎರಡು ಓಂ ಪ್ರತಿಮೆ ಮಾಡಿಸಿ **show case** ನಲ್ಲಿ ಇರಿಸಿದ್ದಾಳೆ. ನನ್ನ ನಾಲ್ಕು ವರ್ಷದ ಮಗಳು ರಮ್ಯ ಹಾಗೂ ಅವಳ ಗೆಳತಿ, ಲಕ್ಷ್ಮೀ ಪ್ರತಿಮೆಯನ್ನು ಯಾವ ಮಾಯದಿಂದಲೋ ಏನೋ **show case** ನಿಂದ ಎಗರಿಸಿ ಆಡಲು ತೆಗೆದುಕೊಂಡು ಹೋಗಿ, ಅದನ್ನು ವಾರಿಜಾಳ ಮನೆಯ ಬಾಗಿಲ ಹೊರಗಡೆ ಬಿಟ್ಟು ಬಂದಿದ್ದಾರೆ. ಮರುದಿನ ಶುಕ್ರವಾರ, ಇದಾವುದೂ ಗೊತ್ತಿರದ ವಾರಿಜಾ, ಬೆಳಿಗ್ಗೆ ಬಾಗಿಲು ತೆರೆದಾಗ ಸುಂದರವಾದ ಬೆಳ್ಳಿ ಪ್ರಭೆಯಿಂದ ಹೊಳೆಯುವ ಲಕ್ಷ್ಮೀ ಪ್ರತಿಮ ಕಂಡಿದೆ. ದೈವ ಭಕ್ತೆಯಾದ ಅವಳು ಅದನ್ನು ತೆಗೆದುಕೊಂಡು ಹೋಗಿ ದೇವರ ಮನೆಯಲ್ಲಿ ಉಳಿದ ದೇವರ ಜೊತೆಯಲ್ಲಿಟ್ಟು ನಾಲ್ಕೈದು ದಿನ ಪೂಜೆ ಮಾಡಿದ್ದಾಳೆ. ಶುಕ್ರವಾರದ ದಿನ ತನಗೆ ಲಕ್ಷ್ಮೀ ಪ್ರತಿಮೆ ಸಿಕ್ಕಿದೆಯೆಂತಲೂ ಅದು ತನಗೆ ಬಂದ ಅದೃಷ್ಟವೆಂದೂ ಉಳಿದ ನೆರೆಯವರಿಗೆ ಹೇಳಿದ್ದಾಳೆ. ಲಕ್ಷ್ಮೀ ಪ್ರತಿಮೆ ಶೋಕೇಸ್‌ನಿಂದ ಮಾಯವಾದದ್ದನ್ನು ಪ್ರಭಾ ಒಂದು ವಾರದವರೆಗೆ ಗಮನಿಸಿಲ್ಲ. ಅದು ವಾರಿಜಾಳಿಗೆ ಸಿಕ್ಕ ವಿಷಯ ಪ್ರಭಾಳಿಗೆ ನೆರೆಯ